# ಅಬಕಾರಿ ಸಬ್‌ಇನ್ಸ್‌ಪೆಕ್ಟರ್ ಪ್ರಶ್ನೆಪತ್ರಿಕೆ

## (ESI-2013)

## ಸಾಮಾನ್ಯ ಅಧ್ಯಯನ, ಪತ್ರಿಕೆ -1

### ಪ್ರಬಂಧ ಮತ್ತು ಭಾಷಾಂತರ

**ಸಮಯ : 60 ನಿಮಿಷಗಳು** **ಅಂಕಗಳು:50**

1. ಕೆಳಕಂಡ ಯಾವುದಾದರೂ ಒಂದು ವಿಷಯವನ್ನು ಕುರಿತು ಮುನ್ನೂರು ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.

   ಎ. ಒಂದು ರಾಜ್ಯ – ಅನೇಕ ಜಗತ್ತುಗಳು – ಕರ್ನಾಟಕ

   ಬಿ. ಭಾರತೀಯ ಕುಟುಂಬಗಳ ಬದಲಾಗುತ್ತಿರುವ ರಚನೆ

   ಸಿ. ಕಾರ್ಪೊರೇಟರ್ ಸಾಮಾಜಿಕ ಜವಾಬ್ದಾರಿ

2. ಈ ಕೆಳಕಂಡ ಪ್ಯಾರಾವನ್ನು ಕನ್ನಡದಿಂದ ಆಂಗ್ಲ ಭಾಷೆಗೆ ಭಾಷಾಂತರಿಸಿ.

ಪುಸ್ತಕಗಳು ನಮ್ಮ ಅತ್ಯುತ್ತಮ ಸಂಗಾತಿಗಳು. ನಮ್ಮ ಗೆಳೆಯರು, ಯಾವುದೋ ಅನಾನುಕೂಲದಿಂದ ಅಥವಾ ಖಾಯಿಲೆಯಿಂದ ನಮಗೆ ಸಹಾಯ ಮಾಡಲು ಯಾವಾಗಲೂ ಸಿದ್ಧವಾಗಿರುತ್ತವೆ. ನಾವು ಪುಸ್ತಕಗಳ ಮಾತುಗಳನ್ನು ಕೇಳಿ ಸಾಂತ್ವನ ಪಡೆಯುತ್ತೇವೆ. ಪುಸ್ತಕ ಓದುವುದೆಂದರೆ ಅದರ ಲೇಖಕನೊಡನೆ ಮಾತನಾಡಿದಂತೆ, ಅವನ ಮಾತುಗಳನ್ನು ಆಲಿಸಿದಂತೆ ಅನಿಸುತ್ತದೆ. ನಾವು ಲೇಖಕನೊಡನೆ ಮಾತನಾಡಿದರೆ ನಮ್ಮ ಮಾತುಗಳನ್ನು ಅವನು ಮೌನವಾಗಿ ಕೇಳುತ್ತಾನೆ ಆದರಿಂದ ನಮಗೆ ನೆಮ್ಮದಿ ಸಿಗುತ್ತದೆ. ಕೆಲವು ಪುಸ್ತಕಗಳು ಲೇಖಕನ ಸೃಷ್ಟಿಯಾಗಿದ್ದು ನಮ್ಮನ್ನು ಇನ್ನೊಂದು ಲೋಕಕ್ಕೆ ಕರೆದೊಯ್ದು ಸಾಂತ್ವಾನ ನೀಡುತ್ತವೆ. ನಮ್ಮೊಡನೆ ಪುಸ್ತಕಗಳಿದ್ದರೆ ನಮಗೆ ಒಂಟಿತನವಾಗಲಿ ಬೇಸರವಾಗಲಿ ಆಗುವುದಿಲ್ಲ. ಪುಸ್ತಕಗಳನ್ನು ಓದುತ್ತಿರುವಾಗ ನಾವು ಕೇವಲ ಆ ಲೇಖಕನೊಡನೆ ಸಂಭಾಷಣೆ ಮಾಡುತ್ತಿರುವುದಿಲ್ಲ. ಪುಸ್ತಕದಲ್ಲಿ ಬಿಂಬಿತವಾಗಿರುವ ಬದುಕಿನಲ್ಲಿ ಭಾಗವಹಿಸಿರುತ್ತೇವೆ. ಒಂದು ವೇಳೆ ಪುಸ್ತಕ ಪುರಾತನ ಗ್ರೀಸ್ ಅಥವಾ ರೋಮ್ ಅನ್ನು ಚಿತ್ರಿಸಿದ್ದರೆ ನಾವೂ ಕೂಡ ಗ್ರೀಸ್ ಅಥವಾ ರೋಮನ್‌ಲ್ಲಿದ್ದೇವೆ ಎನಿಸುತ್ತದೆ. ಪುಸ್ತಕಗಳು ನಮ್ಮನ್ನು ಗತಕಾಲಕ್ಕೆ ವರ್ಗಾಯಿಸಿದಾಗ ಪುರಾತನ ನಾಯಕ ಪಾತ್ರಗಳು ನಮ್ಮ ಸಂಗಾತಿಗಳಾಗುತ್ತಾರೆ. ಕಾದಂಬರಿ ಓದುವಾಗ ನಾವು ಕೆಲವೊಮ್ಮೆ ಅಲ್ಲಿ ಬಂದಿರುವ ನಾಕಯ ಪಾತ್ರಗಳು ನಮ್ಮ ಸಂಗಾತಿಗಳಾಗುತ್ತಾರೆ. ಕಾದಂಬರಿ ಓದುವಾಗ ನಾವು ಕೆಲವೊಮ್ಮೆ ಅಲ್ಲಿ ಬಂದಿರುವ ನಾಯಕ ಪಾತ್ರಗಳು ನಮ್ಮ ಸಂಗಾತಿಗಳಾಗುತ್ತಾರೆ. ಕಾದಂಬರಿ ಓದುವಾಗ ನಾವು ಕೆಲವೊಮ್ಮೆ ಅಲ್ಲಿ ಬಂದಿರುವ ಯಾವುದಾದರೂ ಪಾತ್ರದೊಡನೆ ನಮ್ಮನ್ನು ಗುರುತಿಸಿಕೊಳ್ಳುತ್ತೇವೆ ಹಾಗೂ ಅವನೊಡನೆ ಅಥವಾ ಅವಳೊಡನೆ ಅನುಭವ ಹಂಚಿಕೊಳ್ಳುತ್ತೇವೆ. ನಮ್ಮೊಡನೆ ಪುಸ್ತಕವೊಂದಿದ್ದರೆ ನಮ್ಮ ಸ್ವಂತಕೋಣೆಯಲ್ಲಿ ಕುಳಿತು ಜಗತ್ತನ್ನು ಸುತ್ತುತ್ತೇವೆ. ಆದ್ದರಿಂದ ಆಗಾಗ್ಗೆ ಪುಸ್ತಕ ಓದುವುದೆಂದರೆ ಕಾಲ ಮತ್ತು ದೇಶದೊಳಗೆ ಪ್ರಯಾಣಿಸಿದಂತೆ. ಜಾನ್ ರಸ್ಕಿನ್ ಪುಸ್ತಕಗಳನ್ನು 'ರಾಜೈಶ್ವರ್ಯ' ಎನ್ನುತ್ತಾನೆ ಬಂಗಾರದ ಬೆಳ್ಳಿ ಅಮೂಲ್ಯ ಹರಳುಗಳಿಂದ ಕೂಡಿದ ಖಜಾನೆಯಲ್ಲ, ಆದರೆ ಅದಕ್ಕಿಂತ ಹೆಚ್ಚು ಶ್ರೀಮಂತವಾದವು. ಜ್ಞಾನ, ಉದಾತ್ತವಾದ ಆಲೋಚನೆ ಮತ್ತು ಉನ್ನತ ಧ್ಯೇಯಗಳು.

ಪುಸ್ತಕಗಳು ಮಾರ್ಗದರ್ಶನವನ್ನಲ್ಲದೆ ಸಂತಸ ನೀಡುತ್ತವೆ. ಪುಸ್ತಕಗಳನ್ನು ಓದುತ್ತಾ ಎಷ್ಟೋ ವಿಚಾರಗಳನ್ನು ನಾವು ಕಲಿಯುತ್ತೇವೆ. ಅದೇ ಸಮಯದಲ್ಲಿ ಅವು ನಮಗೆ ಅಮೂಲ್ಯ ಸಂತಸ ನೀಡುತ್ತವೆ. ಆದ್ದರಿಂದ ಪುಸ್ತಕಗಳು ನಮ್ಮ ಅತ್ಯುತ್ತಮ ಸಂಗಾತಿಗಳು.

3. ಈ ಕೆಳಗಿನ ಕಂಡಿಕೆಯನ್ನು ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸಿ.

From very ancient times teachers have been honoured as builders of the nation. Plato and Aristotle in Greece, Vasishta and Vishvamitra in India, enjoyed a status next only to kings and princes. Their word was a law to their disciples. But it must be rememberef they were ideal men, sages and saints who thought of the good of others every moment of their lives.

Teachers are the salt of the Earth. When teachers grow weak or corrupt, that means, the utter ruin of the society. They are the lamps that shatter darkness, the light houses that the wandering ships and keep it away from dangerous rocks.

An ideal teacher is, hi the first place, the master of his subject. He spends his days in the pursuit of studies. He is ever hungry for the latest information and resarches on his subject. He reads journals and magazines which keeps him well informed and up to date. A library is a temple to him.

A good teacher is regualr and punctual, always takes pains to teach his students. A perfect teacher is always fair and impartial. For him all students are alike. He is like a father to them. An ideal teacher is simple in his habits. He has no time for the glitter and pomp of life because these are declarations of empty minds. If he has any spare money, he would spend it on books and magazines rather than an curious and deceration pieces.

# ಅಬಕಾರಿ ಸಬ್ ಇನ್ಸ್‌ಪೆಕ್ಟರ್ (ಇಎಸ್ಐ) ನೇಮಕಾತಿ ಪರೀಕ್ಷೆ-2013

## ಸಾಮಾನ್ಯ ಅಧ್ಯಯನ

1. ಒಬ್ಬ ಸ್ವತಂತ್ರ ರಾಜನೆಂದು ಶಿವಾಜಿಗೆ ಕಿರೀಟಧಾರಣೆ ಎಲ್ಲಿ ನಡೆಯಿತು?

1. ಪುಣೆ 2. ಸೂರತ್
3. ರಾಯಗಢ 4. ಸಿಂಹಗಢ

2. ಕೆಳಗಿನವುಗಳನ್ನು ಸರಿಯಾಗಿ ಹೊಂದಿಸಿ.

ಎ. 312ನೇ ಅನುಚ್ಛೇದ 1. ಸರ್ವೋಚ್ಚ ನ್ಯಾಯಾಲಯದ ಮೂಲ ಅಧಿಕಾರ ವ್ಯಾಪ್ತಿ
ಬಿ. 368ನೇ ಅನುಚ್ಛೇದ 2. ಹಣಕಾಸು ಆಯೋಗದ ಸ್ಥಾಪನೆ
ಸಿ. 131ನೇ ಅನುಚ್ಛೇದ 3. ಅಖಿಲ ಭಾರತ ಸೇವೆಗಳು
ಡಿ. 280ನೇ ಅನುಚ್ಛೇದ 4. ಸಂವಿಧಾನದ ತಿದ್ದುಪಡಿ

ಕೋಡ್

| | ಎ | ಬಿ | ಸಿ | ಡಿ |
|---|---|---|---|---|
| 1. | 3 | 1 | 2 | 4 |
| 2. | 3 | 2 | 1 | 4 |
| 3. | 3 | 4 | 1 | 2 |
| 4. | 2 | 3 | 4 | 1 |

3. ಸೂರತ್‌ನಲ್ಲಿ ಕಾರ್ಖಾನೆಯನ್ನು ಆರಂಭಿಸಲು ಬ್ರಿಟಿಷರ ಪರವಾಗಿ ಆಜ್ಞಾಪನೆ ಹೊರಡಿಸಿದ ಮೊದಲ ಮೊಘಲ್ ಚಕ್ರವರ್ತಿ

1. ಔರಂಗ ಜೇಬ್ 2. ಜಹಂಗೀರ್
3. ಶಹಜಹಾನ್ 4. ಅಕ್ಬರ್

4. ರಾಮ ಮತ್ತು ರಹೀಂ ಇವೆರಡೂ ಒಂದೇ ದೈವದ ಬೇರೆ ಬೇರೆ ಹೆಸರುಗಳು ಎಂದು ಹೇಳಿದವರು

1. ಕಬೀರ್ 2. ರಾಮದಾಸ್
3. ಚೈತನ್ಯ 4. ರಮಾನಂದ

5. ಕಪ್ಪು ರಂಧ್ರದ ದುರಂತವು ಕೆಳಕಂಡ ಕದನಕ್ಕೆ ಮುಖ್ಯ ಕಾರಣ

1. ಬಕ್ಸಾರ್ 2. ಪ್ಲಾಸಿ
3. ವಾಂಡಿವಾಶ್ 4. ಹಳದಿ ಘಾಟ್

6. ಬಾದಾಮಿ ಚಾಲುಕ್ಯರು ಅಭಿವೃದ್ಧಿ ಪಡಿಸಿದ ವಾಸ್ತು ಶಿಲ್ಪದ ಶೈಲಿ ಯಾವುದು?

1. ದ್ರಾವಿಡ 2. ವೆಸರ
3. ನಾಗರ 4. ಗೋಪುರಂ

7. ಈ ಕೆಳಕಂಡ ಪ್ರದೇಶದಲ್ಲಿರುವ ಶಾಸನಗಳು ಚೋಳರ ಕಾಲದಲ್ಲಿದ್ದಂತಹ ಗ್ರಾಮಾಡಳಿತದ ವಿವರಗಳನ್ನು ಒದಗಿಸುತ್ತವೆ.

1. ತಂಜಾವೂರ್ 2. ಉರೈಯೂರ್
3. ಕಾಂಚೀಪುರಂ 4. ಉತ್ತರ ಮೆರೂರ್

8. ಮೈಸೂರು ಚಲೋ ಚಳವಳಿ ನಡೆದ ವರ್ಷ

1. 1945 2. 1946 3. 1947 4. 1949

9. ಹಿಂದೂಸ್ತಾನ್ ಸೇವಾ ದಳವನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸಿದವರು

1. ಕಡಪ ರಾಘವೇಂದ್ರ ರಾವ್
2. ಎಚ್.ಆರ್. ದೇಶಪಾಂಡೆ
3. ಗೋವಿಂದರಾವ್ ಯಾಲಗಿ
4. ಡಾ॥ ಎನ್.ಎಸ್. ಹರ್ಡೀಕರ್

10. ಪಟ್ಟಿ 1ಮತ್ತು ಪಟ್ಟಿ2ನ್ನು ಸರಿಹೊಂದಿಸಿ ಕೆಳಕಂಡ ಸಂಕೇತಗಳನ್ನು ಬಳಸಿ ಸರಿ ಉತ್ತರ ತಿಳಿಸಿ.

| ಪಟ್ಟಿ -1 | ಪಟ್ಟಿ - 2 |
|---|---|
| ಎ. ಅಹ್ಮದ್‌ನಗರ | 1. ನಿಜಾಂ ಶಾಹಿ |
| ಬಿ. ಗೋಲ್ಕಂಡ | 2. ಕುತಾಬ್ ಶಾಹಿ |
| ಸಿ. ಬಿಜಾಪುರ | 3. ಆದಿಲ್ ಶಾಹಿ |

ಡಿ. ಬೀದರ್ 4. ಬರೀದ್ ಶಾಹಿ

ಕೋಡ್

| | ಎ | ಬಿ | ಸಿ | ಡಿ |
|---|---|---|---|---|
| 1. | 2 | 1 | 3 | 4 |
| 2. | 4 | 1 | 3 | 2 |
| 3. | 1 | 2 | 3 | 4 |
| 4. | 2 | 4 | 1 | 3 |

11. ಸಂವಿಧಾನ ಸಭೆಯ ಅಧ್ಯಕ್ಷರಾಗಿದ್ದವರು
   1. ಜವಹರ್ ಲಾಲ್ ನೆಹರೂ
   2. ಡಾ. ಬಿ.ಆರ್. ಅಂಬೇಡ್ಕರ್
   3. ಡಾ. ರಾಜೇಂದ್ರ ಪ್ರಸಾದ್
   4. ಡಾ. ರಾಧಾಕೃಷ್ಣನ್

12. ಕರ್ನಾಟಕದ ರೈಲ್ವೆ ಜಾಲದ ಒಟ್ಟು ಉದ್ದವು ಸುಮಾರು......
   1. 2800 ಕಿ.ಮೀ. 2. 2500 ಕಿ.ಮೀ.
   3. 3500 ಕಿ.ಮೀ. 4. 3100 ಕಿ.ಮೀ.

13. ಕಲಹರಿ ಮರುಭೂಮಿ ಎಲ್ಲಿದೆ?
   1. ಬೋಟ್ಸ್‌ವಾನಾ 2. ನೈಜೀರಿಯಾ
   3. ಜೈರೆ 4. ಇಥಿಯೋಪಿಯಾ

14. ಈ ಕೆಳಗಿನವುಗಳಲ್ಲಿ ದೊಡ್ಡ ಅಳತೆಯ ಭೂಪಟ ಯಾವುದು?
   1. ಗೋಡೆಗೆ ಹಾಕುವ ಭೂಪಟ
   2. ಹವಾಮಾನದ ಭೂಪಟಗಳು
   3. (ಕಡಸ್ಟ್ರಲ್) ಜಮೀನಿನ ಭೂಪಟಗಳು
   4. ಭೌತಿಕ ಭೂಪಟಗಳು

15. ಭೂಮಿಯ ಒಳಭಾಗದ ಯಾವ ಪದರವು ಸ್ನಿಗ್ಧ ಸ್ಥಿತಿಯಲ್ಲಿದೆ?
   1. ಸೆಂಟ್ರೋಸ್ಪಿಯರ್ 2. ಅಸ್ತನೋಸ್ಪಿಯರ್
   3. ಲಿಥೋಸ್ಪಿಯರ್ 4. ಮೀಸೋಸ್ಪಿಯರ್

16. ಕೆಳಕಂಡ ಯಾವ ನದಿಯು ಪಕ್ಷಿಪಾದದ ಡೆಲ್ಟಾವನ್ನು ರೂಪಿಸಿದೆ.
   1. ಮಿಸಿಸಿಪ್ಪಿ 2. ಅಮೆಜಾನ್ 3. ಗಂಗಾ 4. ನೈಲ್

17. ವೆಗೆನೆರ್‌ನು ದಿಕ್‌ಚ್ಯುತಿ ಸಿದ್ಧಾಂತವನ್ನು ಮುಖ್ಯವಾಗಿ ಈ ಕೆಳಕಂಡ ಅಂಶವನ್ನು ವಿವರಿಸಲು ಪ್ರತಿಪಾದಿಸಿದನು.
   1. ಭೂರಾಶಿಗಳ ಭೂವೈಜ್ಞಾನಿಕ ಸಾಮ್ಯತೆಗಳು
   2. ಭೂರೂಪಗಳ ವಿತರಣೆ
   3. ಪ್ರಮುಖ ಹವಾಮಾನ ವ್ಯತ್ಯಾಸಗಳು
   4. ಹಿಮಯುಗಗಳು

18. ಕೀಲ್ ಕಾಲುವೆಯು ಈ ಕೆಲಗಿನವುಗಳಿಗೆ ಸಂಪರ್ಕ ಕಲ್ಪಿಸುತ್ತದೆ
   1. ಬಾಲ್ಟಿಕ್ ಸಮುದ್ರ ಹಾಗೂ ನಾರ್ತ್ ಸೀ
   2. ಕೆರೀಬಿಯನ್ ಸಮುದ್ರ ಹಾಗೂ ಪೆಸಿಫಿಕ್ ಮಹಾಸಾಗರ
   3. ಬೆರ್ರಿಂಗ್ ಸಮುದ್ರ ಮತ್ತು ಪೆಸಿಫಿಕ್ ಮಹಾಸಾಗರ
   4. ಕೆಂಪು ಸಮುದ್ರ ಮತ್ತು ಮೆಡಿಟರೇನಿಯನ್ ಸಮುದ್ರ

19. ವಾತಾವರಣದ ಶಾಖ ಏರಿಕೆ ಹೇಗೆ ನಡೆಯುತ್ತದೆ?
   1. ನೇರವಾಗಿ ಬೀಳುವ ಸೂರ್ಯಕಿರಣಗಳಿಂದ
   2. ಜ್ವಾಲಾಮುಖಿಯ ಚಿಮ್ಮುವಿಕೆಗಳಿಂದ
   3. ಭೂಮಿಯ ವಿಕಿರಣದಿಂದ
   4. ಸಾಗರೀಯ ಪ್ರವಾಹಗಳಿಂದ

20. ಕೊಟೋಪಾಕ್ಸಿ ಇರುವುದೆಲ್ಲಿ?
   1. ಬ್ರೆಜಿಲ್ 2. ಅರ್ಜೆಂಟೈನಾ 3. ಈಕ್ವೆಡಾರ್ 4. ಪೆರು

21. ಪದರ ಕಳಚುವಿಕೆ (ಎಕ್ಸ್‌ಫೋಲಿಯೇಶನ್)ಯು ಒಂದು
   1. ರಾಸಾಯನಿಕ ಪ್ರಕ್ರಿಯೆ 2. ಜೈವಿಕ ಪ್ರಕ್ರಿಯೆ
   3. ಮಾನವ ಪ್ರೇರಿತ ಪ್ರಕ್ರಿಯೆ 4. ಭೌತಿಕ ಪ್ರಕ್ರಿಯೆ

22. ಚಿಕ್ಕದಾದ ಮಳೆಹನಿಗಳು ದುಂಡನೆಯ ಆಕಾರದಲ್ಲಿರುವುದಕ್ಕೆ ಕಾರಣ
   1. ಗುರುತ್ವ 2. ವಾತಾವರಣದ ಒತ್ತಡ
   3. ಸ್ನಿಗ್ಧತೆ 4. ಮೇಲ್ಮೈಕರ್ಷಣ

23. ಅಂತರರಾಷ್ಟ್ರೀಯ ಖಗೋಳ ಶಾಸ್ತ್ರೀಯ ಸಂಘ (ಐಎಯು)ವು ಗ್ರಹಗಳನ್ನು ಕುರಿತಂತೆ ನೀಡಿರುವ ಇತ್ತೀಚಿನ ವ್ಯಾಖ್ಯಾನದ ಪ್ರಕಾರ, ಈ ಕೆಳಗಿನದು ಗ್ರಹ ಎನಿಸಿಕೊಳ್ಳುವುದಿಲ್ಲ.
   1. ಶುಕ್ರ 2. ಪ್ಲೂಟೊ 3. ನೆಪ್‌ಚ್ಯೂನ್ 4. ಯುರೇನಸ್

24. ಯುಹೆಚ್‌ಎಫ್ ಪಟ್ಟಿಯ ಆವರ್ತಾಂಕ ವ್ಯಾಪ್ತಿ ಎಷ್ಟು ?
   1. 3 ರಿಂದ 30 ಮೆಗಾಹರ್ಟ್ಜ್
   2. 30 ರಿಂದ 300 ಮೆಗಾಹರ್ಟ್ಜ್
   3. 300 ರಿಂದ 3000 ಮೆಗಾಹರ್ಟ್ಜ್
   4. 4000 ರಿಂದ 30000 ಮೆಗಾಹರ್ಟ್ಜ್

25. ಡೀಸೆಲ್ ಇಂಜಿನ್‌ನಲ್ಲಿ ಈ ಕೆಳಗಿನವುಗಳು ಬಳಕೆಯಾಗುತ್ತವೆ
   1. ಸಿಲಿಂಡರ್, ಸ್ಪಾರ್ಕ್ ಪ್ಲಗ್ ಮತ್ತು ಪಿಸ್ಟನ್

2. ಸಿಲಿಂಡರ್ ಮತ್ತು ಸ್ಪಾರ್ಕ್‌ಪ್ಲಗ್

3. ಸ್ಪಾರ್ಕ್‌ಪ್ಲಗ್ ಮತ್ತು ಪಿಸ್ಟನ್

4. ಸಿಲಿಂಡರ್ ಮತ್ತು ಪಿಸ್ಟನ್

26. ಸಿಸ್ಟೈಟಿಸ್ ಎಂಬ ಸೋಂಕು ಯಾವ ರೋಗಕ್ಕೆ ಸಂಬಂಧಿಸಿದೆ?

1. ಲಿವರ್ 2. ಮೂತ್ರಕೋಶ

3. ಪ್ಯಾಂಕ್ರಿಯಾಸ್ 4. ಶ್ವಾಸಕೋಶ

27. ವಿಶ್ವ ಅರಣ್ಯ ದಿನವನ್ನು ಆಚರಿಸಲಾಗುವ ದಿನಾಂಕ ಯಾವುದು?

1. 21ನೇ ಮಾರ್ಚ್ 2. 22ನೇ ಮಾರ್ಚ್

3. 5ನೇ ಜೂನ್ 4. 2ನೇ ಫೆಬ್ರವರಿ

28. ಪಟಾಕಿಗಳಿಗೆ ಕೆಳಕಂಡ ಧಾತುಗಳ ಲವಣಗಳಿಂದ ಬಣ್ಣವನ್ನು ನೀಡಲಾಗುತ್ತದೆ.

1. ಜಿಂಕ್ ಮತ್ತು ಮ್ಯಾಂಗನೀಸ್

2. ಪೊಟಾಶಿಯಂ ಮತ್ತು ಮರ್ಕ್ಯುರಿ

3. ಸ್ಟ್ರಾನ್ಷಿಯಂ ಮತ್ತು ಬೇರಿಯಂ

4. ಕ್ರೋಮಿಯಂ ಮತ್ತು ನಿಕ್ಕಲ್

29. ಕೊಳಚೆ ನೀರಿನ ಸಂಸ್ಕರಣ ವ್ಯವಸ್ಥೆಗಳಲ್ಲಿ ನೀರನ್ನು ಕ್ರಿ ಶುದ್ಧಗೊಳಿಸುವುದಕ್ಕಾಗಿ ಯಾವ ಎರಡು ಅನಿಲಗಳ ಬಳಕೆಯಾಗುತ್ತದೆ?

1. ಹೀಲಿಯಂ ಮತ್ತು ನೈಟ್ರೋಜನ್

2. ಓಜೋನ್ ಮತ್ತು ಕ್ಲೋರಿನ್

3. ಆಮ್ಲಜನಕ ಮತ್ತು ಜಲಜನಕ

4. ನೈಟ್ರೋಜನ್ ಮತ್ತು ಕ್ಲೋರಿನ್

30. ಗ್ರಾಫೀನ್ ಎಂಬುದು ನ್ಯಾನೊ ತಂತ್ರಜ್ಞಾನದ ಉತ್ಪನ್ನವಾಗಿದೆ. ಇದರ ಮಹತ್ವವೇನು?

1. ಇದು ಅತ್ಯಂತ ತೆಳುವಾದ, ಬಲವಾದ ಎರಡು ಆಯಾಮಗಳ ವಸ್ತುಗಳಲ್ಲೊಂದಾಗಿದೆ

2. ಇದು ಉತ್ತಮ ಉಷ್ಣವಾಹಕತ್ವ ಗುಣವಿರುವ ಒಂದು ವಿಧದ ಪ್ಲಾಸ್ಟಿಕ್ ವಸ್ತು

3. ಇದು ಅತ್ಯಂತ ತೆಳುವಾದ, ಬಲವಾದ ಒಂದು ಆಯಾಮದ ವಸ್ತುಗಳಲ್ಲೊಂದಾಗಿದೆ

4. ಇದು ಅತ್ಯಂತ ತೆಳುವಾದ 3 ಆಯಾಮಗಳ ವಸ್ತು

31. ಒಂದು ಯಂತ್ರವು 0, 1, 2, 3, 4, 5 ಎಂಬುದನ್ನು ಅನುಕ್ರಮವಾಗಿ 0, 1, 10, 11, 100, 101 ಎಂಬುದಾಗಿ ವಾಚಿಸಿದರೆ 7 ಎಂಬುದರ ವಚನಾಂಕ ಯಾವುದು?

1. 110 2. 111 3. 1000 4. 1001

32. ಒಂದು ಸಮಭುಜೀಯ ತ್ರಿಕೋನದ ಪಾರ್ಶ್ವವನ್ನು ಅಷ್ಟೇ ಎತ್ತರದ ಇನ್ನೊಂದು ಸಮಭುಜೀಯ ತ್ರಿಕೋನದ ಪಾರ್ಶ್ವಕ್ಕೆ ಅಂಟಿಸಿದರೆ ಯಾವ ಆಕಾರ ಸಿಗುತ್ತದೆ?

1. ಚೌಕ 2. ಆಯತಾಕಾರ

3. ಸಮಾಂತರ ಚತುರ್ಭುಜ 4. ಪಂಚಭುಜಾಕೃತಿ

33. ದ್ಯುತಿ ಎಳೆಯು ಕೆಳಕಂಡ ತತ್ವದ ಅನ್ವಯ ಕಾರ್ಯ ನಿರ್ವಹಿಸುತ್ತದೆ.

1. ವಿವರ್ತನೆ 2. ಸಂಪೂರ್ಣ ಆಂತರಿಕ ಪ್ರತಿಫಲನ

3. ಪ್ರತಿಫಲನ 4. ವ್ಯತಿಕರಣ

34. ಒಂದು ಪೂರ್ಣ ಸಂಖ್ಯೆ ಹಾಗೂ ಅದರ ಆನಂತರದ ಸಂಖ್ಯೆಯ ಮೊತ್ತವನ್ನು ಇನ್ನೊಂದು ಪೂರ್ಣಸಂಖ್ಯೆ ಹಾಗೂ ಅದರ ಆನಂತರದ ಸಂಖ್ಯೆಯ ಮೊತ್ತಕ್ಕೆ ಕೂಡಿಸಿದಾಗ ಬರುವ ಮೊತ್ತ 368 ಆಗಿದೆ. ಕೂಡುವಿಕೆಯ ಬದಲು ಕಳೆಯುವಿಕೆ ಮಾಡಿದರೆ ಬರುವ ವ್ಯತ್ಯಾಸ 78. ಹಾಗಿದ್ದರೆ ಈ ಸಂಖ್ಯೆಗಳು ಯಾವುವು?

1. 70 ಮತ್ತು 110 2. 71 ಮತ್ತು 113

3. 75 ಮತ್ತು 100 4. 72 ಮತ್ತು 111

35. 7, 13, 23, 37, 56, 67 ಎಂಬ ಸಂಖ್ಯಾ ಸರಣಿಯಲ್ಲಿ ಒಂದು ಸಂಖ್ಯೆಯು ತಪ್ಪಾಗಿದೆ. ಇಲ್ಲಿರಬೇಕಾಗಿದ್ದ ಸರಿಯಾದ ಸಂಖ್ಯೆ ಯಾವುದು?

1. 22 2. 36 3. 55 4. 65

36. ಒಂದು ಗಡಿಯಾರದಲ್ಲಿ 3:25 ಆಗಿದ್ದಾಗ ನಿಮಿಷದ ಮುಳ್ಳು ಹಾಗೂ ಗಂಟೆಯ ಮುಳ್ಳಿನ ನಡುವೆ ಇರುವ ಕೋನ ಎಷ್ಟು ?

1. $60^0$ 2. $47^1/2^0$ 3. $50^1/_2{}^0$ 4. $52^1/_2{}^0$

37. A, B, C, D, E ಮತ್ತು F ಎಂಬ ಆರು ರಾಜಕಾರಣಿಗಳು ಒಂದು ಸಭೆಯಲ್ಲಿ ಸಾಲಾಗಿ ಕುಳಿತಿದ್ದಾರೆ. B ಎಂಬಾತನು F ಮತ್ತು D ಗಳ ಮಧ್ಯೆ ಕುಳಿತಿದ್ದಾನೆ. E ಎಂಬಾತನು A ಮತ್ತು C ಗಳ ಮಧ್ಯೆ ಕುಳಿತಿದ್ದಾನೆ. A ಎಂಬಾತನು F ಅಥವಾ D ಯ ಪಕ್ಕದಲ್ಲಿ ಕುಳಿತಿಲ್ಲ. C ಎಂಬಾತನು D ಎಂಬಾತನ ಪಕ್ಕದಲ್ಲಿ ಕುಳಿತಿಲ್ಲ. ಹೀಗಿದ್ದಾಗ F ಎಂಬಾತನು ಯಾರ ನಡುವೆ ಕುಳಿತಿದ್ದಾನೆ?

1. B ಮತ್ತು C 2. B ಮತ್ತು E

3. B ಮತ್ತು D 4. A ಮತ್ತು B